

ನಿಸಾರ್ ಜೊತೆ ಲೇಖಕರು

ಅನ್ನು ಅಭಿವೃದ್ಧಿ ಮಾಡಿದ್ದವರು. ಆಗ ಅವರು ಹಾಸಿಗೆ ಹಿಡಿದು ಆಸ್ಪತ್ರೆಯಲ್ಲಿದ್ದರು.

ಅದು 2011ನೇ ಇಸವಿ. ಟ್ಯಾಗೋರ್ ಅವರ 150ನೇ ವರ್ಷಾಚರಣೆ ನಡೆಯುತ್ತಿತ್ತು. ನಾನು ತಕ್ಷಣ, 'ಟ್ಯಾಗೋರರ ಒಂದು ಪುತ್ಥಳಿಯನ್ನು ಮಾಡಿಸಿಕೊಡುವೆ. ಅದನ್ನು ಉದ್ಯಾನದಲ್ಲಿ ನೀವೇ ಅನಾವರಣ ಮಾಡಬೇಕು' ಎಂದು ಕೇಳಿಕೊಂಡೆ. ಅದಕ್ಕವರು 'ಎಂಥಾ ಅದ್ಭುತ ಯೋಚನೆ ನಿನ್ನದು, ಖಂಡಿತವಾಗಿ ಬರ್ತೀನಿ! ಅಂತಹ ಮಹಾನ್ ವಿಶ್ವಕವಿಯ ಪುತ್ಥಳಿ ಅನಾವರಣ ನನ್ನಿಂದ ಆಗುವುದಾದರೆ, ನಾನು ಭಾಗ್ಯಶಾಲಿ' ಎಂದು ಹೇಳಿದ್ದರು. ಅದರಂತೆ, ಖ್ಯಾತ ಶಿಲ್ಪಿ ಅಶೋಕ್ ಗುಡಿಗಾರ್ ಅವರಿಂದ ರವೀಂದ್ರರ ಪುತ್ಥಳಿ ಮಾಡಿಸಿದೆ. ಆದರೆ ಬಿಬಿಎಂಪಿ ಮತ್ತು ಸ್ಥಳೀಯವಾಗಿ ಕೆಲವರು ಎತ್ತಿದ ತಕರಾರಿನಿಂದಾಗಿ ನಿಸಾರ್ ಅವರಿಂದ ಪುತ್ಥಳಿ ಅನಾವರಣ ಮಾಡಿಸಲು ಆಗಲೇ ಇಲ್ಲ. ಕೊನೆಗೆ ಅಂದಿನ ಶಾಸಕರಿಂದ ಪುತ್ಥಳಿ ಅನಾವರಣ ಮಾಡಿಸಬೇಕಾಯಿತು. 'ಸಾರ್, ನಿಮ್ಮ ಕೈಯಿಂದ ಟ್ಯಾಗೋರ್ ಪ್ರತಿಮೆಯನ್ನು ಅನಾವರಣಗೊಳಿಸೋಕೆ ಆಗಲೇ ಇಲ್ಲ' ಎಂದು ನನ್ನ ನೋವನ್ನು ಹೇಳಿಕೊಂಡೆ. ಆಗವರು 'ಪರವಾಗಿಲ್ಲ ಬಿಡಯ್ಯಾ! ಟ್ಯಾಗೋರ್ ಪಾರ್ಕ್‌ನಲ್ಲಿ ಟ್ಯಾಗೋರ್ ಅವರು ಬಂದು ಕೂತ್ಕೊಂಡರಲ್ಲ, ಅಷ್ಟೇ ಸಾಕು' ಎಂದು ಗಂಭೀರ ವಿಷಯವನ್ನು ಹಾಸ್ಯಕ್ಕೆ ತಿರುಗಿಸಿಬಿಟ್ಟರು. ನಂತರ, 'ಪ್ರತಿಮೆ ಕೂರಿಸಿ ಬಿಟ್ಟರೆ ಸಾಲದು ಕಣಯ್ಯ, ಟ್ಯಾಗೋರ್ ಅವರ ಬಗ್ಗೆ ನಾಲ್ಕು ಜನಕ್ಕೆ ತಿಳಿಯುವ ಹಾಗೆ ಕನಿಷ್ಠ ವರ್ಷಕ್ಕೊಮ್ಮೆ ಒಂದು ಸಣ್ಣ ಕಾರ್ಯಕ್ರಮ ಮಾಡು'